ಬೇಕಾಗಿತ್ತು, ರೆವಿನ್ಯೂ ಇಲಾಖೆಗೆ ಜಾಗ ಬೇಕೆಂದು ಕೇಳಿದ್ದೆವು. ನಾವು ಕೇಳಿದ್ದ ಜಾಗವನ್ನು ರಿಸರ್ವ್ ಫಾರೆಸ್ಟ್ ಎಂದು ಹೇಳಿ ಕೊಡಲಿಲ್ಲ. ಬೇರೆ ಜಾಗವನ್ನು ನಿಧಾನವಾಗಿ ಕೊಟ್ಟರು. ಇದರಿಂದ ಬಹಳ ಕಾಲ ಹಿಡಿಯಿತು. ಯು. ಜಿ. ಸಿ. ಯವರ ಹಣ ಲ್ಯಾಪ್ಸ್ ಆಗಿಲ್ಲ. ಅವರು ಮತ್ತೆ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರ ಷೇರ್ ಕೊಡುತ್ತೇವೆಂದು ಹೇಳಿದ್ದಾರೆ. ಕಟ್ಟಡ ನಿರ್ಮಾಣಕ್ಕೆ ಬೇಕಾದ ೨೯.೫೦ ಲಕ್ಷ ರೂ. ಗಳಲ್ಲಿ ಯು. ಜಿ. ಸಿ. ಯವರು ೧೫.೧೫ ಲಕ್ಷವನ್ನು ಕೊಡುತ್ತಾರೆ. ಉಳಿದ ಹಣವನ್ನು ರಾಜ್ಯ ಸರ್ಕಾರ ಯೂನಿವರ್ಸಿಟಿಗೆ ಕೊಡಬೇಕು. ಆದುದರಿಂದ ಯು. ಜಿ. ಸಿ. ಹಣ ಲ್ಯಾಪ್ಸ್ ಆಯಿತು ಎಂಬುದು ಸತ್ಯಕ್ಕೆ ದೂರವಾದುದು.

ಶ್ರೀ ಎಸ್. ಎಂ. ಚಂದ್ರಶೇಖರ್.—ತಮ್ಮ ಉತ್ತರದಲ್ಲಿಯೇ ಹೇಳಿದ್ದೀರಿ. ಅಳಿಯ ಅಲ್ಲ ಮಗಳ ಗಂಡ ಎಂದು. ಪುನಃ ಯು. ಜಿ. ಸಿ.ಯವರನ್ನ ಕೇಳಿಕೊಳ್ಳಲಾಗಿದೆಯೆಂದು ಹೇಳುತ್ತಿದ್ದೀರಿ. ಈ ಹಣ ಲ್ಯಾಪ್ಸ್ ಆಗದೇ ಹೋಗಿದ್ದ ಮೇಲೆ ಪುನಃ ಅವರನ್ನು ಕೇಳಿಕೊಳ್ಳುವ ಪ್ರಶ್ನೆ ಹೇಗೆ ಬಂತು. ಒಬ್ಬ ತಾಸಕ ಇಲ್ಲಿ ಪ್ರಶ್ನೆಯನ್ನು ತರಬೇಕಾದರೆ ಆತ ಆ ಪ್ರಶ್ನೆಯನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ ತಂದಿರುತ್ತಾನೆ. ಅದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ಅಂಕಿಗಳು ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ೧೦ ಲಕ್ಷವೋ, ೫ ಲಕ್ಷವೋ ಹೆಚ್ಚು ಕಡಿಮೆಯಾಗಬಹುದು. ಅಲ್ಲಿಯ ಪಿನ್ಸಿಪಾಲರು ಅಧಿಕಾರಿಗಳು, ವಿದ್ಯಾರ್ಥಿಗಳು ಈ ಕಟ್ಟಡವನ್ನು ಕಟ್ಟದೇ ದುಡ್ಡು ಲ್ಯಾಪ್ಸ್ ಆದುದರ ಬಗ್ಗೆ ಚಳುವಳಿಯನ್ನು ಮಾಡಿದ್ದಾರೆ. ಅದರ ಆಧಾರದ ಮೇಲೆ ಪ್ರಶ್ನೆಯನ್ನು ತಂದಿದ್ದೇನೆ. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ?

† ಶ್ರೀ ಜಿ. ಬಿ ಶಂಕರರಾವ್.—ಇದರಲ್ಲಿ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ವಿಶ್ವವಿದ್ಯಾನಿಲಯದ ಧನಸಹಾಯದ ಆಯೋಗದವರು ಹಣವನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಕಟ್ಟಡ ಕಟ್ಟುವುದಕ್ಕೆ ನಿವೇಶನ ಸಿಗುವುದರಲ್ಲಿ ಸ್ವಲ್ಪ ವಿಳಂಬವಾದ್ದರಿಂದ ಈ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯದವರು ಒನೇ ಯೋಜನೆಯ ಸಲಹೆಗಳಲ್ಲಿ ಸೇರಿಸಲಾಗಿದೆ. ಅವರು ತಕ್ಷಣದಲ್ಲಿ ಹಣವನ್ನು ಕೊಡುತ್ತಾರೆ. ಹೀಗಿರುವಾಗ ನಿಮಗೆ ಏಕೆ ಭಯ ?

ಶ್ರೀ ಎಸ್. ಎಂ ಚಂದ್ರಶೇಖರ್.—ಇದನ್ನು ಎಷ್ಟು ದಿವಸಗಳಲ್ಲಿ ಮಾಡಿಕೊಡುತ್ತೀರಿ. ಅಲ್ಲಿ ಎಂ ಎ, ಎಂ.ಎಸ್‌ಸಿ ತರಗತಿಗಳು ನಡೆಯುತ್ತಿವೆ. ಶ್ರೀ ಬದರೀನಾರಾಯಣ್ ಅವರು ಮಂತ್ರಿಗಳಾಗಿದ್ದಾಗ ಇದು ಮಂಜೂರಾಗಿದ್ದರೂ ಸಹ ಇವತ್ತಿನವರೆಗೆ ಕಟ್ಟಡವಿಲ್ಲದೆ ಅಲ್ಲಿ ಬಹಳ ತೊಂದರೆಯಾಗಿದೆ. ಈ ಸ್ಥಿತಿಗೆ ಯಾರು ಜವಾಬ್ದಾರರು ?

ಶ್ರೀ ಜಿ. ಬಿ. ಶಂಕರರಾವ್.—ಇದಕ್ಕೆ ಯಾರೂ ಜವಾಬ್ದಾರರಾಗಿರುವುದಿಲ್ಲ. ಸಮಯಕ್ಕೆ ಸರಿಯಾಗಿ ಜಮೀನು ಸಿಗದಿದ್ದದರಿಂದ ಇದು ತಡವಾಗಿದೆ. ಈಗ ಜಮೀನು ಸಿಕ್ಕಿದೆ. ಇದರ ಎಸ್ಟಿಮೇಟ್ ತಯಾರಾಗಬೇಕಾಗುತ್ತದೆ. ಪುನಃ ವಿಶ್ವವಿದ್ಯಾನಿಲಯದ ಧನಸಹಾಯದ ಆಯೋಗದವರಿಗೆ ತಿಳಿಸುತ್ತೇವೆ. ಆಗ ಅವರು ಹಣವನ್ನು ಕೊಡುತ್ತಾರೆ. ಜಾಗ ಸಿಗದ ಕಾರಣ ತಡವಾದದ್ದಕ್ಕೆ ತಪ್ಪನ್ನು ಯಾರ ಮೇಲೂ ಹೊರಿಸುವುದಕ್ಕೆ ಬರುವುದಿಲ್ಲ.)

Western Ghats Developmental Schemes

725 SRI K. B. MALLAPPA (Arkalgud).—Will the Minister for Finance and Planning be pleased to state.—

(a) the Schemes which have been formulated under "Western Ghats Development Scheme" ;

(b) the number of taluks in Hassan District that come under this scheme ;

(c) the criteria or salient features to bring the above taluks under this scheme ;

(d) Arkalgud taluk is is a semi-malnad and is at the shade of Wesfern Ghats ; the reasons for non-inclusion of Arkalgud taluk in this scheme ;

(e) whether there is any proposal to include Arkalgud Taluk in Western Goats Development scheme ;

SRI M. VEERAPPA MOILY (Minister for Finance and Planning). —

(a) Schemes have been formulated from the sectors of Animal Husbandry, Horticulture, Agriculture, Minor Irrigation, Forestry, Small Scale Industries, Tourism and Sericulture.

(b) During the Fifth Plan Period, only Sakaleshpur was covered in Hassan District. From the year 1979-80 onwards, Belur, Alur and Hassan taluks are also covered.

(c) The work of identification of Taluks for inclusion in the Western Ghats Region Development Programme was entrusted by the Planning Commission, Government of India, to the Town and Country Planning Organisation, New Delhi. The criteria adopted for this purpose by the Organisation are : (i) 600 metres height above the sea level, and (ii) coverage of atleast 25 per cent of the area of the taluk.

(d) The reason for non-inclusion of Arkalgud Taluk in the Western Ghats Region Development Programme is that it was not selected by the Town and Country Planning Organisation for the purpose.

(e) Government are making effortr for its inclu ion.

ಶ್ರೀ ಕೆ. ಬಿ. ಮಲ್ಲಪ್ಪ —ಸ್ವಾಮಿ, ನಮ್ಮ ಅರಕಲಗೂಡು ತಾಲೂಕನ್ನು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೆ ಏತಕ್ಕೆ ಸೇರಿಸಲಿಲ್ಲವೆಂದು ಕೇಳುತ್ತೇನೆ? ಹಾಗೆ ಸೇರಿಸದಿರಲು ಅನಾನುಕೂಲತೆಗಳು ಏನು ಇರುತ್ತವೆಂದು ಕೇಳಿರುವುದಕ್ಕೆ

> "The work of identification of Taluks for inclusion in the Western Ghats Region Development Programme was entrusted by the Planning Commission, Government of India"

ಎಂದು ಹೇಳಿದ್ದೀರಿ. ಇಲ್ಲಿ ಪಶು ಸಂಗೋಪನೆ, ತೋಟಗಾರಿಕೆ, ವ್ಯವಸಾಯ, ಸಣ್ಣ ನೀರಾವರಿ ಅರಣ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳು, ಪ್ರವಾಸೋದ್ಯಮ ಹಾಗೂ ರೇಷ್ಮೆ ವ್ಯವಸಾಯ ಇವೇ ಮುಂತಾದ ಸ್ಥಳೀಯ ಸವಲತ್ತುಗಳು ದೊರೆಯುತ್ತಿದ್ದರೂ ಅರಕಲಗೂಡು ತಾಲ್ಲೂಕನ್ನು ವೆಸ್ಟರ್ನ್ ಘಾಟ್ ಡೆವಲೆಪ್‌ಮೆಂಟ್ ಸ್ಕೀಂಗೆ ಸೇರಿಸಲು ಏತಕ್ಕೆ ಶಿಫಾರಸು ಮಾಡಲಿಲ್ಲವೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಪಶ್ಚಿಮ ಘಟ್ಟದ ಯೋಜನೆಯಲ್ಲಿ ಮೊದಲನೆಯ ದಾಗಿ ೨ೆ ತಾಲ್ಲೂಕುಗಳನ್ನು ಸೇರಿಸಿದ್ದೇವೆ. ಅನಂತರ ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಈ ಎಲ್ಲ ಕ್ರೈಟೀರಿಯಾವನ್ನು ಪರಿಗಣನೆ ಮಾಡಿ ೪೦ ತಾಲ್ಲೂಕುಗಳನ್ನು ೧೯೭೯-೮೦ನೇ ಇಸವಿಯಲ್ಲಿ

ಸೇರಿಸಿಕೊಳ್ಳಬೇಕೆಂದು ಹೇಳಿದ್ದಕ್ಕೆ ಅವರು ನಮ್ಮ ಒತ್ತಾಯವನ್ನು ಪರಿಗಣಿಸಿ ತೆಗೆದುಕೊಂಡಿರುತ್ತಾರೆ. ಇದಕ್ಕೆ ಅವರು ಏನೇನು ಕ್ರೈಟೀರಿಯಾಗಳಿರಬೇಕೆಂಬುದನ್ನು ಹೇಳಿದ್ದಾರೆ ಅದನ್ನು ಉತ್ತರದಲ್ಲಿ ಕಾಣಿಸಿರುತ್ತೇನೆ. ಯಾವುದೇ ಪ್ರದೇಶವನ್ನು ವೆಸ್ಟರ್ನ್ ಘಾಟ್ ಸ್ಕೀಂಗೆ ಸೇರಿಸಬೇಕಾದರೆ

> ' Climate, rainfall, land holding, cropping pattern, trade, pattern, low productivity urbanisation, population density, low-income, culture and consciousness, infrastructural facilities '

ಅಂತ ಹೇಳಿರುವ ವಿಧವಾದಂಥ ಒಂದು ಮೌಲ್ಯಮಾಪನವನ್ನು ಇಟ್ಟುಕೊಂಡು ವಿಚಾರ ಮಾಡಬೇಕಾಗಿದೆ. ಆ ಪ್ರಕಾರವಾಗಿ ೫೫ ತಾಲ್ಲೂಕುಗಳನ್ನು ಪರಿಗಣಿಸಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಇದ್ದೇವೆ. ಇದರಲ್ಲಿ ದುರದೃಷ್ಟವಶಾತ್ ಅರಕಲಗೂಡನ್ನು ಪರಿಗಣನೆ ಮಾಡಿಲ್ಲ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪುನಃ ಒತ್ತಾಯ ಮಾಡುತ್ತೇವೆ.

ಶ್ರೀ ಕೆ. ಬಿ. ಮಲ್ಲಪ್ಪ.—ಆರನೂರು ಮೀಟರ್ಸ್ ಹೈಟ್ ಇರತಕ್ಕಂಥ ಮತ್ತು ೨೫ ಪರ್ಸೆಂಟ್ ಏರಿಯಾವನ್ನು ಕವರ್ ಮಾಡತಕ್ ಂಥ ಕ್ರೈಟೀರಿಯಾ ಇದ್ದರೂ, ತಮ್ಮ ಸ್ಟೇಟ್‌ಮೆಂಟಿನಲ್ಲಿ ನಾಲ್ಕೈದು ವಿಚಾರಗಳನ್ನು ಇಟ್ಟುಕೊಂಡು ಹೇಳಿರುತ್ತೀರಿ. ಆದ್ದರಿಂದ ನಮ್ಮ ತಾಲ್ಲೂಕನ್ನು ವೆಸ್ಟರ್ನ್ ಘಾಟ್ ಸ್ಕೀಂಗೆ ಸೇರಿಸುವುದಕ್ಕೆ ರೆಕಮೆಂಡೇಷನ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದನ್ನು ಮಾಡಬೇಕಾದರೆ ಕೇಂದ್ರ ಸರ್ಕಾರದವರು ಏನೇನು ಕ್ರೈಟೀರಿಯಾ ಇಟ್ಟುಕೊಂಡಿರುತ್ತಾರೆ ಅದನ್ನೆಲ್ಲಾ ವಿವರವಾಗಿ ಹೇಳಿರುತ್ತೇನೆ. ಇವೆಲ್ಲ ಕ್ರೈಟೀರಿಯಾ ಹೊಂದಿರತಕ್ಕಂಥ ಅರಕಲಗೂಡನ್ನು ಸೇರಿಸಿ ಕಳುಹಿಸಿದ್ದೇವೆ. ಅವರು ಒಪ್ಪಲಿಲ್ಲದೆಂದರೆ ಮತ್ತೆ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತೇವೆ. ೫೫ ತಾಲ್ಲೂಕುಗಳನ್ನು ಸೇರಿಸಬೇಕೆಂದು ಈಗ ಏನು ಒತ್ತಾಯ ಮಾಡುತ್ತಿದ್ದೇವೆ ಅದರಲ್ಲಿ ಮುಖ್ಯವಾಗಿ ಅರಕಲಗೂಡು ಸೇರಿರುತ್ತದೆ.

ಶ್ರೀ ವಿ. ಎಂ. ಘಾಡಿ.—ಸ್ವಾಮಿ, ನಾರ್ತ್ ಕೆನರಾದಲ್ಲಿ ತಾವು ಹೇಳಿರುವ ಕ್ರೈಟೀರಿಯಾವನ್ನು ಒಳಗೊಂಡಂತೆ ಎರಡು ತಾಲ್ಲೂಕುಗಳು ಅಂದರೆ ಹಳಿಯಾಳ ಮತ್ತು ಮುಂಡಗೋಡು ಬರುತ್ತವೆ. ಈ ತಾಲ್ಲೂಕುಗಳನ್ನು ವೆಸ್ಟರ್ನ್ ಘಾಟ್ ಸ್ಕೀಂನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಈಗ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವ ೫೫ ತಾಲ್ಲೂಕುಗಳಲ್ಲಿ ನಾರ್ತ್ ಕೆನರಾದ ಹಳಿಯಾಳ ಮತ್ತು ಮುಂಡಗೋಡು ತಾಲ್ಲೂಕುಗಳನ್ನು ಸೇರಿಸಿಲ್ಲ. ಮುಂದೆ ಸೇರಿಸಲು ಒತ್ತಾಯ ಮಾಡುತ್ತೇವೆ.

ಶ್ರೀ ವಿ. ಎಂ. ಘಾಡಿ.—ಈಗಲಾದರೂ ಅವುಗಳನ್ನು ವೆಸ್ಟರ್ನ್ ಘಾಟ್ ಸ್ಕೀಂನಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗಾಗಲೇ ಅದರ ಬಗ್ಗೆ ಉತ್ತರ ಕೊಟ್ಟಿರುತ್ತೇನೆ.

MR. SPEAKER.—Question hour is over.

SRI B. B. SAYANAK.—Mr. Speaker Sir, I had given a notice under Rule 312 regarding shortage of note-books and exercise books.

MR. SPEAKER.—I suggest to you that the information has not been received. Immediately after the information is received we will post in the agenda.